ಸರ್ಕಾರಿ ಧೋರಣೆ ಬಿಟ್ಟು ಹೋಗಿ ಏನೂ ಹೇಳುವುದಕ್ಕೆ ಆಗುವುದಿಲ್ಲ. ಹೇಳುವುದೂ ಕೂಡ ತಪ್ಪಾಗುತ್ತದೆ. ಈ ಒಂದು ವ್ಯವಸ್ಥೆಯನ್ನು ಮಾಡುವ ಪ್ರಯತ್ನವನ್ನೂ ಕೂಡ ಖಂಡಿತವಾಗಿ ಮಾಡುತ್ತೇನೆಂದು ಹೇಳುತ್ತೇನೆ.

ಶ್ರೀ ಬಿ.ಆರ್. ಯಾವಗಲ್ :- ಒಂದು ಸಣ್ಣ ಕ್ಲಾರಿಫಿಕೇಷನ್.....

**MR. CHAIRMAN:-** No furter clarifications ಇದೊಂದು ಪ್ರಕಟಣೆ ಇದೆ.

(13) ಪ್ರಕಟಣೆಗಳು

1. ಆರನೆ ಅಧಿವೇಶನದಲ್ಲಿ ತಡೆಹಿಡಿಯಲಾದ 64 ಚುಕ್ಕೆ ಗುರುತಿನ ಪ್ರಶ್ನೆಗಳಲ್ಲಿ 36ಕ್ಕೆ ಉತ್ತರಗಳನ್ನು ಸ್ವೀಕರಿಸಲಾಗಿದ್ದು, ಅವುಗಳನ್ನು ಸದನದಲ್ಲಿ ಮಂಡಿಸುವುದು.

   ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಸಚಿವರು) :- ಮಂಡಿಸಲಾಯಿತು. ಅನುಬಂಧ-IV

2. ಕರ್ನಾಟಕ ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ. "ಕರ್ನಾಟಕ ಪಂಚಾಯತ್ ರಾಜ್ ತಿದ್ದುಪಡಿ ವಿಧೇಯಕವನ್ನು ಪರಶೀಲಿಸಿ ವರದಿಯನ್ನು ಸಲ್ಲಿಸಲು ರಚಿಸಲಾಗಿರುವ ಜಂಟಿ ಸದನ ಪರಿಶೀಲನಾ ಸಮಿತಿಗೆ ವಿಧಾನಪರಿಷತ್ತಿನ ಸಹಮತಿಯೋಡನೆ ಈ ಕೆಳಕಂಡ ಐದು ಜನ ವಿಧಾನಪರಿಷತ್ ಸದಸ್ಯರನ್ನು ನಾಮನಿರ್ದೇಶನ ಮಾಡಿರುತ್ತಾರೆ. ಶ್ರೀಯುತರುಗಳಾದ ಎ.ಎಂ. ಹಿಂಡಸಗೇರಿ, ವಿ.ಆರ್. ಸುದರ್ಶನ್, ಹೆಚ್.ಎಸ್. ಶಾಂತವೀರಪ್ಪಗೌಡ, ಬಿ.ಜಿ. ಪಾಟೀಲ್, ಎಂ.ಪಿ. ಪ್ರಕಾಶ್

ಈಗ ಕರ್ನಾಟಕ ಭೂ ಸುಧಾರಣಾ ತಿದ್ದುಪಡಿ ವಿಧೇಯಕ 2002, ವಿಧಾನಪರಿಷತ್ತಿನಿಂದ ಅಂಗೀಕೃತ ರೂಪದಲ್ಲಿರುವ 2002ನೇ ಸಾಲಿನ ಕರ್ನಾಟಕ ಭೂ ಸುಧಾರಣೆಗಳ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ. ಮಾನ್ಯ ಚಂದ್ರೇಗೌಡರೆ, ತಾವು.....

ಶ್ರೀ ಪಿ.ಜಿ.ಆರ್. ಸಿಂಧ್ಯ :- ಚೇರ್ಮನ್‌ರವರೆ, ನಾವು ಬೆಳಿಗ್ಗೆ ಒಂಬತ್ತು ಗಂಟೆಗೆ ಮನೆ ಬಿಡುತ್ತೇವೆ. ಹತ್ತು ಗಂಟೆಗೆ ಇಲ್ಲಿಗೆ ಬರುತ್ತೇವೆ. ಬರುವವರಿಗೆ ಶಿಕ್ಷೆ ಕೊಡಬೇಕೆಂದು ಇದ್ದೀರ. ಸೋಮವಾರ ಮಾಡಿಕೊಡುತ್ತೇವೆ. I have got a function at Ramanagaram ಅವರು ಕಾಯ್ದುಕೊಂಡಿರುತ್ತಾರೆ. ನಾವೇನೋ ಐದಾರು ಗಂಟೆಗೆ ಮುಕ್ತಾಯವಾಗುತ್ತದೆಂದು ಹೇಳಿದರೆ ನೀವು ಎಲ್ಲಾ ತೆಗೆದುಕೊಂಡರೆ, ಎಲ್ಲಾ ನಾವು ಮಾಡಿಕೊಟ್ಟಿದ್ದೇವೆ.

ಚೇರ್ಮನ್ :- ಹತ್ತು ನಿಮಿಷ....

ಶ್ರೀ ಪಿ.ಜಿ.ಆರ್. ಸಿಂಧ್ಯ :- ನೀವು ಆಡಳಿತ ಪಕ್ಷದವರು ಮಾಡಿಕೊಳ್ಳಿ, ನಾವು ಆಚೆ ಹೋಗುತ್ತೇವೆ. I am very sorry Sir,

ಶ್ರೀ ಡಿ.ಬಿ. ಚಂದ್ರೇಗೌಡ :- ಎರಡು ನಿಮಿಷದಲ್ಲಿ ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಇಲ್ಲ ಸ್ವಾಮಿ ಆಗುವುದಿಲ್ಲ. ಇದನ್ನು ಸೋಮವಾರ ಮಾಡೋಣ. ಏನು ಆಗಿಬಿಡುತ್ತದೆ?

ಚೇರ್ಮನ್ :- ಇದೊಂದು ಕರ್ನಾಟಕ ಪೌರಸಭೆಗಳು (ತಿದ್ದುಪಡಿ) ವಿಧೇಯಕ...

ಶ್ರೀ ಪಿ.ಜಿ.ಆರ್. ಸಿಂಧ್ಯ :- ಅದು ಅಷ್ಟೇ ಸ್ವಾಮಿ, ಎಲ್ಲಾ ಅಷ್ಟೆ. ಸೋಮವಾರ ಮಾಡಿದರೆ ಏನಾಗುತ್ತದೆ? ಈಗ ಏನೂ ಚರ್ಚೆ ಮಾಡುವುದು ಬೇಡ. Is this the attitude of this Government?

ಚೇರ್ಮನ್ :- ಮಾನ್ಯ ಸಿಂಧ್ಯರವರೇ, ತಾವು ಹಿರಿಯ ಸದಸ್ಯರಿದ್ದೀರಿ....

ಶ್ರೀ ಪಿ.ಜಿ.ಆರ್. ಸಿಂಧ್ಯ :- ಸ್ವಾಮಿ, ನಮಗೆಲ್ಲಾ ಗೊತ್ತಿದೆ, ನಾವು ಆಡಳಿತ ನಡೆಸಿದ್ದೇವೆ. 24 ಗಂಟೆಯಲ್ಲಿ ಏನೂ ಆಗುವುದಿಲ್ಲ. ಅದನ್ನು ನೀವು ಮಾಡಿಕೊಳ್ಳಬೇಕು ಎಂದರೆ ಮಾಡಿಕೊಳ್ಳಿ. ನಮ್ಮದೇನೂ ತಕರಾರಿಲ್ಲ.

ಚೇರ್ಮನ್ :- ರಾತ್ರಿ ಹನ್ನೆರಡು ಗಂಟೆಯವರೆಗೆ ಕುಳಿತುಕೊಂಡಿದ್ದೇವೆ ಎಂದು ನಿನ್ನೆ ನೀವು ಹೇಳಿದಿರಿ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ನಾನೇನು ಅಧ್ಯಕ್ಷರಿಗೆ ಹೇಳಿದ್ದೇನೆ ಅದು ನಿಮಗೆ ಗೊತ್ತಿಲ್ಲ. ದಯವಿಟ್ಟು ಕ್ಷಮಿಸಿ.

ಚೇರ್ಮನ್ :- ವಿಧೇಯಕಗಳನ್ನು ಅಜೆಂಡಾ ಪ್ರಕಾರ ನಡೆಯಲಿಲ್ಲ ಎಂದರೆ...

ಶ್ರೀ ಪಿ.ಜಿ.ಆರ್. ಸಿಂಧ್ಯ :- ಅಜೆಂಡಾ ಪ್ರಕಾರ ಹಾಕಿದ್ದೆಲ್ಲಾ ಯಾವತ್ತೂ ನಡೆದಿಲ್ಲ. ಅಜೆಂಡಾ ಪ್ರಕಾರ ಸರ್ಕಾರ ಕೂಡ ನಡೆದಿಲ್ಲ.

ಚೇರ್ಮನ್ :- ಕರ್ನಾಟಕ ಪೌರಸಭೆಗಳ ವಿಧೇಯಕ...

ಶ್ರೀ ಪಿ.ಜಿ.ಆರ್. ಸಿಂಧ್ಯ :- ಸ್ವಾಮಿ, ಈ ತರಹ ನೀವು ಮಾಡಬೇಕೆಂದರೆ ಮಾಡಿಕೊಳ್ಳಿ. ನೀವು ಮಾಡಲೇಬೇಕು ಎಂದು ಇದ್ದರೆ.....

ಶ್ರೀ ಡಿ.ಬಿ. ಚಂದ್ರೇಗೌಡ :- ಅಧ್ಯಕ್ಷರಿಗೆ ಧ್ವನಿ ಏರಿಸಿ ಮಾತನಾಡುವುದು ಅಷ್ಟು ಸರಿಯಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಸ್ವಾಮಿ, ನೀವು ಇದ್ದಾಗಲೂ ಅಷ್ಟೆ, ಧ್ವನಿ ಏರಿಸಿ ಮಾತನಾಡಿದ್ದು ಇದೆ. ನೀವು ಮಾಡಿಕೊಳ್ಳಿ ಯಾರು ಬೇಡ ಎನ್ನುತ್ತಾರೆ.

ಚೇರ್ಮನ್ :- ನಾನು ಈ ಸ್ಥಾನದಲ್ಲಿ ಕುಳಿತುಕೊಂಡ ಮೇಲೆ ನನ್ನ ಕರ್ತವ್ಯವನ್ನು ನಾನು ಮಾಡಬೇಕಾಗಿದೆ. ದಯವಿಟ್ಟು ಕುಮಾರ ಬಂಗಾರಪ್ಪನವರು ಹೇಳಿ.....

ಶ್ರೀ ಪಿ.ಜಿ.ಆರ್. ಸಿಂಧ್ಯ :- ನಿಮ್ಮ ಕರ್ತವ್ಯವನ್ನು ನೀವು ಮಾಡಿ. ನಿಯಮಾವಳಿ ಪ್ರಕಾರ ನಡೆಯಬೇಕಾಗುತ್ತದೆ. ಮನುಷ್ಯತ್ವ ಇರಬೇಕಾಗುತ್ತದೆ. ಸೋಮವಾರ ಮಾಡಿದರೆ ಏನಾಗಿಬಿಡುತ್ತದೆ?

ಶ್ರೀ ಡಿ.ಬಿ. ಚಂದ್ರೇಗೌಡ :- ಯಾರು ಬೇಡ ಎಂದರು?

ಶ್ರೀ ಪಿ.ಜಿ.ಆರ್. ಸಿಂಧ್ಯ :- ಅದನ್ನೇ ನಾನು ಹೇಳುತ್ತಿದ್ದೆ ನಾವು ಅಪೀಲ್ ಮಾಡುತ್ತಿದ್ದರೂ ಸಭೆ ನಡೆಸಿದರೆ, ನಡೆಸಿಕೊಳ್ಳಿ.

ಶ್ರೀ ಡಿ.ಬಿ ಚಂದ್ರೇಗೌಡ :- ಈ ಸದನದಲ್ಲಿ ಏನಾಗುತ್ತಿದೆ ಎಂದರೆ ಅವರು ಹೇಳಿದ್ದಷ್ಟೇ ಕಡತಕ್ಕೆ ಹೋಗುತ್ತದೆ. ಸರ್ಕಾರ ಕಡೆಯಿಂದ ಉತ್ತರ ಕೇಳುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಇವರು ಸಂಸದೀಯ ವ್ಯವಹಾರ ಮಂತ್ರಿಗಳು ಹೇಳಿದ ಹಾಗೆ ಎಲ್ಲಾ ನಡೆಯುವುದು. ಏನೇನು ಬೇಕು ಎಲ್ಲಾ ಮಾಡಿಕೊಟ್ಟಿದ್ದೇವೆ. ಇವರಿಗೆ ಶಹಭಾಸ್‌ಗಿರಿ ದಿನ ಕೊಡುತ್ತಿರಬೇಕು. We are not the cheer boys here.

**SRI. D.B. CHANDRE GOWDA:** This is not the way of the member to behave in this House.

**SRI P.G.R. SINDHIA:** Remove me from my membership if I have misbehaved.

**SRI D.B. CHANDRE GOWDA:** We have not said a word about it. This is not the way to behave.....

**SRI P.G.R. SINDHIA:** I also know about your behaviour.

**SRI D.B. CHANDRE GOWDA:** You cannot shout at the Chair.

**SRI P.G.R. SINDHIA:** I know how you people have behaved.

**ಚೇರ್ಮನ್ :-** ಮಾನ್ಯ ಸಿಂಧ್ಯರವರೇ, ತಾವು ಹಿರಿಯ ಸದಸ್ಯರಾಗಿದ್ದೀರಿ, ನೀವು ಈ ರೀತಿ ಕೋಪ, ತಾಪಗಳನ್ನು ಪ್ರದರ್ಶನ, ಮಾಡುವಂಥಾದ್ದು ಸರಿಯಲ್ಲ.

**ಶ್ರೀ ಪಿ.ಜಿ.ಆರ್. ಸಿಂಧ್ಯ :-** ಮಾನ್ಯ ಚೇರ್ಮನ್‌ರವರೇ, ಇದರಲ್ಲಿ ಹಿರಿಯರು ಎನ್ನುವ ಪ್ರಶ್ನೆ ಬರುವುದಿಲ್ಲ.

**ಶ್ರೀ ಡಿ.ಬಿ. ಚಂದ್ರೇಗೌಡ :-** ಮಾನ್ಯ ಚೇರ್ಮನ್‌ರವರೇ, ತಾವು ಸಲಹೆ ಮಾಡಿದ್ದೀರಿ, ಈಗ ಮಾನ್ಯ ವಿರೋಧಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದಾರೆ, ನಮ್ಮ ಅಭ್ಯಂತರ ಏನೂ ಇಲ್ಲ, ಆಯಿತು ಸೋಮವಾರ ತೆಗೆದುಕೊಳ್ಳೋಣ, ಯಾರು ಬೇಡವೆಂದರು.

**ಚೇರ್ಮನ್ :-** ಈಗ ಸದನವನ್ನು ಸೋಮವಾರ ಬೆಳಿಗ್ಗೆ 11.00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಸಂಜೆ 6 ಗಂಟೆ 21 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ 31ನೇ ಮಾರ್ಚ್ ಮಾಹೆ 2003ರ ಸೋಮವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)**

**(†ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)**

## 14. ಅನುಬಂಧ-I

### ಕರ್ನಾಟಕ ನೀರು ಪೂರೈಕೆ ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕ, 2003

**(2003ರ ವಿಧಾನ ಪರಿಷತ್ತಿನ ವಿಧೇಯಕ ಸಂಖ್ಯೆ 2)**

**(ವಿಧಾನ ಪರಿಷತ್ತಿನಲ್ಲಿ ಅಂಗೀಕಾರವಾದ ರೂಪದಲ್ಲಿ)**

ಕರ್ನಾಟಕ ನೀರು ಪೂರೈಕೆ ಪ್ರದೇಶಾಭಿವೃದ್ಧಿ ಅಧಿನಿಯಮ, 1980ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ನೀರು ಪೂರೈಕೆ ಪ್ರದೇಶಾಭಿವೃದ್ಧಿ ಅಧಿನಿಯಮ, 1980ನ್ನು (1980ರ ಕರ್ನಾಟಕ ಅಧಿನಿಯಮ 6) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ:

ಇದು ಭಾರತ ಗಣರಾಜ್ಯದ ಐವತ್ನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ:- (1) ಈ ಅಧಿನಿಯಮವನ್ನು, ಕರ್ನಾಟಕ ನೀರು ಪೂರೈಕೆ ಪ್ರದೇಶಾಭಿವೃದ್ಧಿ (ತಿದ್ದುಪಡಿ) ಅಧಿನಿಯಮ, 2003 ಎಂದು ಕರೆಯತಕ್ಕದ್ದು.